# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC No.929/2024**

**CW: 01 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 28.11.2025**

| | |
|---|---|
| ಹೆಸರು | : ಬಸ್ಸಮ್ಮ ಕೊಂಕ್ಲೇರ |
| ಗಂಡನ ಹೆಸರು | : ನಾಗರಾಜ |
| ವಯಸ್ಸು | : 23 |
| ಉದ್ಯೋಗ | : ಮನೆಗೆಲಸ |
| ವಾಸಸ್ಥಳ | : ಹೊನಗುಂಟ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾ-2 ಮತ್ತು 3 ಇವರ ಪರಿಚಯ ಇರುತ್ತದೆ. ಚಾಸಾ-4 ಮತ್ತು 5 ನನ್ನ ತಂದೆ ತಾಯಿ ಇರುತ್ತಾರೆ. ಚಾಸಾ-6 ಮತ್ತು 7 ನನ್ನ ಸಹೋದರರಾಗಿರುತ್ತಾರೆ, ಚಾಸಾ-8 ನನ್ನ ಅತ್ತೆ ಆಗಬೇಕು, ಆರೋಪಿ ನಂ.1 ನನ್ನ ಪತಿ. ನನ್ನ ಮದುವೆಯು ಹೊನಗುಂಟ ಗ್ರಾಮದ ಬೀರಲಿಂಗೇಶ್ವರ ದೇವಸ್ತಾನದಲ್ಲಿ ದಿ: 23/05/2021 ರಂದು ನಡೆದಿರುತ್ತದೆ. ಮದುವೆಯ ಬಳಿಕ ನನ್ನ ವೈವಾಹಿಕ ಜೀವನ ನಡೆಸಲು ನನ್ನ ಗಂಡನ ಮನೆಗೆ ಹೋಗಿರುತ್ತೇನೆ.

ಅಲ್ಲಿ ಹೋದ ಬಳಿಕ ಸದರಿ ಆರೋಪಿತರು ನನ್ನ ಬಟ್ಟೆ ಬರೆ ತೆಗೆದುಕೊಂಡು ಹೊರಗೆ ಚೆಲ್ಲಿರುತ್ತಾರೆ ಹಾಗೂ ತವರು ಮನೆಯಲ್ಲಿ ಬಿದ್ದು ಸಾಯಿ ಎಂದು ಹೇಳಿದ್ದು ಇರುತ್ತದೆ. ಆರೋಪಿತರು ನಂತರದಲ್ಲಿ ನನಗೆ ಅಡುಗೆ ಮಾಡಲು ಬರುವುದಿಲ್ಲ ಎಂದು ಹೇಳುತ್ತಿದ್ದರು ಹಾಗೂ ನನ್ನನ್ನು ಹೆಂಡತಿಯಂತೆ ನೋಡಿಕೊಂಡಿರುವುದಿಲ್ಲ. ನನ್ನ ಜೊತೆ ಮಲಗಬೇಕಾದರೆ ಆತನ ತಾಯಿಯನ್ನು ಕೇಳಿ ಮಲಗುತ್ತಿದ್ದರು.

ನೀನು ತಂದೆ ತಾಯಿಗೆ ಫೊನನ್ನು ಹಚ್ಚಬೇಡ ಮರೆತು ಹೋಗು ಎಂದು ಹೇಳಿದ್ದು ಇರುತ್ತದೆ. ಸದರಿ ಆರೋಪಿತರು ನನ್ನ ಜೊತೆ ಜಗಳ ತೆಗೆದಿರುವ ಕುರಿತು ನಾನು ಫಿರ್ಯಾದಿಯನ್ನು ನೀಡಿದ್ದು ಇರುತ್ತದೆ. ಈ ವಿಚಾರವಾಗಿ ನಾನು ಒಂದು ದೂರನ್ನು ಸಲ್ಲಿಸಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಫಿರ್ಯಾದಿಯಾಗಿದ್ದು, ಅದನ್ನು ನಿ.ಪಿ.1 ರಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 (ಎ) ಎಂದು

ನಿಶಾನೆಗೊಳಿಸಲಾಯಿತು. ಸದರಿ ಆರೋಪಿಯು ನನಗೆ ತವರು ಮನೆಗೆ ಬಿಟ್ಟು ಹೋಗಿದ್ದು 5 ವರ್ಷವಾದರೂ ಸಹಿತ ಇಲ್ಲಿಯವರೆಗೂ ಫೋನ್ ಕರೆ ಮಾಡಿರುವುದಿಲ್ಲ. ಸಾಕ್ಷಿದಾರಳು ನನಗೆ ನೆನಪಿನ ಶಕ್ತಿ ಕಮ್ಮಿ ಇರುವ ಕಾರಣ ಫಿರ್ಯಾದಿಯ ಸಂಗತಿಗಳು ನನಗೆ ನೆನಪು ಇರುವುದಿಲ್ಲ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**